ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 06.08.2024.

**ಮುಖ್ಯ ವಿಚಾರಣೆಃ** ಪ್ರತಿವಾದಿ ಪರ ಶ್ರೀ ಎಸ್.ಎಂ.ಜಿ. ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಮೂರು ದೃಢಿಕೃತ ನಕಲುಗಳ ಕ್ರಯ ಪತ್ರಗಳನ್ನು ಹಾಜರುಪಡಿಸಿದ್ದು, ಅವುಗಳ ಮೂಲ ಪ್ರತಿಗಳನ್ನು ಬ್ಯಾಂಕಿಗೆ ನೀಡಿರುತ್ತೇನೆ, ಕಾರಣ ದೃಢಿಕೃತ ನಕಲುಗಳನ್ನು ಕ್ರಮವಾಗಿ ನಿಡಿ-4 ರಿಂದ ನಿಡಿ-6 ಎಂದು, ಮ್ಯೂಟೇಷನ್ ಪ್ರತಿಯನ್ನು ನಿಡಿ-7 ಎಂದು, ಐದು ಕೈ-ಬರಹದ ಪಹಣಿಗಳನ್ನು ಕ್ರಮವಾಗಿ ನಿಡಿ-8 ರಿಂದ ನಿಡಿ-12 ಎಂದು, ಇಂಪತ್ತು ಗಣಕೀಕೃತ ಆರ್‌ಟಿಸಿಗಳನ್ನು ಕ್ರಮವಾಗಿ ನಿಡಿ-13 ರಿಂದ ನಿಡಿ-32 ಎಂದು, ನಾನು ಯುನಿಯನ್ ಬ್ಯಾಂಕಿಗೆ ನೀಡಿದ ಅರ್ಜಿ ಪ್ರತಿಯನ್ನು ನಿಡಿ-33 ಎಂದು, ರೀಕನ್ವಯನ್ಸ್ ಡಿಡ್‌ನ್ನು ನಿಡಿ-34 ಎಂದು, ನಮೂನೆ-15ನ್ನು ನಿಡಿ-35 ಎಂದು, ಆರ್‌ಆರ್ ಏಜೆನ್ಸಿ ರವರು ನೀಡಿದ ರಶೀದಿಯನ್ನು ನಿಡಿ-36 ಎಂದು, ಕೃಷಿ ಉತ್ಪನ್ನ ಮಾರುಕಟ್ಟೆ ರವರು ನೀಡಿದ ರಶೀದಿಯನ್ನು ನಿಡಿ-37 ಎಂದು, ನಾನು ಯುನಿಯನ್ ಬ್ಯಾಂಕಿಗೆ ನೀಡಿದ ಇನ್ನೊಂದು ಅರ್ಜಿ ಪ್ರತಿಯನ್ನು ನಿಡಿ-38 ಎಂದು, ಇನ್ನೊಂದು ರೀಕನ್ವಯನ್ಸ್ ಡಿಡ್‌ನ್ನು ನಿಡಿ-39 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**